**ಸಾಕ್ಷಿಯನ್ನು ದಿ:20.08.2019 ರಂದು ಕರೆಸಿ ಪ್ರಮಾಣ ಬೋಧಿಸಲಾಯಿತು.**

**ಮುಂದುವರೆದ ಪಾಟಿ ಸವಾಲು : ಶ್ರೀ.ಜೆಪಿ ವಕೀಲರಿಂದ:**

ಸಾಕ್ಷಿಗೆ ಈಗ ಆರು ಫೊಟೋಗಳನ್ನು ತೋರಿಸಿ ಸದರಿ ಫೋಟೋದಲ್ಲಿ ಕಾಣಿಸುವ ಜಾಗದಲ್ಲಿಯೇ ಪ್ರತಿವಾದಿಯರು ಮನೆಯನ್ನು ಕಟ್ಟಿರುತ್ತಾರೆ ಅಲ್ಲವೆ ಎಂದರೆ ಸಾಕ್ಷಿಯ ದಾವೆಯನ್ನು ಸಲ್ಲಿಸುವ ಸಮಯದಲ್ಲಿ ಮೊದಲು ಮೂರು ಫೊಟೋದಲ್ಲಿ ಕಾಣುವ ಹಾಗೆ ಇದ್ದು ತದನಂತರ ಸದರಿ ಜಾಗದಲ್ಲಿ ಸಂಪೂರ್ಣ ಮನೆಯನ್ನು ಕಟ್ಟಿರುತ್ತಾರೆ. ಸದರಿ ಮನೆಯನ್ನು ದಾವಾ ಸಲ್ಲಿಸಿದ ನಂತರ ಕಟ್ಟಲಾಗಿರುತ್ತದೆ ಅಲ್ಲವೆ ಎಂದರೆ ಸಾಕ್ಷಿಯು ಹೌದು ಎಂದು ಉತ್ತರಿಸಿರುತ್ತಾರೆ. ಸಾಕ್ಷಿಯು ಸದರಿ 6 ಫೊಟೋಗಳನ್ನು ನೋಡಿ ಗುರುತಿಸಿದ ಕಾರಣ ಫೊಟೋಗಳನ್ನು ನಿಡಿ 1 ರಿಂದ 6 ಎಂದು ಗುರುತಿಸಲಾಯಿತು.

ದಾವಾ ದಾಖಲಿಸುವ ಸಮಯದಲ್ಲಿ ಪ್ರತಿವಾದಿಯರು ಚಾವಣಿಯವರೆಗೆ ಕಟ್ಟಡವನ್ನು ಕಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ಜಮೀನಿನ ಉತ್ತರ ಮತ್ತು ಪಶ್ಚಿಮ ದಿಕ್ಕಿನ ಮದ್ಯೆ ಅಂದರೆ ವಾಯುವ್ಯ ದಿಕ್ಕಿನಲ್ಲಿ ಪ್ರತಿವಾದಿಗಳ ಸ್ವತ್ತು ಬರುತ್ತದೆ ಎಂದರೆ ಸರಿ . ಸದರಿ ಪ್ರತಿವಾದಿಯರ ಮನೆಯ ದಕ್ಷಿಣ ದಿಕ್ಕಿಗೆ ಕಲ್ಯಾಣಿಯವರ ಸ್ವತ್ತು ಬರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿಯರು ಕಟ್ಟಿದ ಮನೆಯ ದಕ್ಷಿಣ ದಿಕ್ಕಿಗೆ ನನಗೆ ಸೇರಿದ ಖಾಲಿ ಜಾಗ ಬರುತ್ತದೆ. ಹಾಗೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ನ್ಯಾಯಾಲಯದ ಮುಖಾಂತರ ನನ್ನ ಮತ್ತು ಪ್ರತಿವಾದಿಯರ ಸ್ವತ್ತನ್ನು ಅಳತೆ ಮಾಡಿದಲ್ಲಿ ನನ್ನ ಯಾವುದೇ ಅಭ್ಯಂತರ ಇರುವುದಿಲ್ಲ. ಪ್ರತಿವಾದಿಯರು ಅವರು ಖರೀದಿ ಮಾಡಿದ ಸ್ವತ್ತಿನಲ್ಲಿಯೇ ಮನೆಯನ್ನು ಕಟ್ಟಿರುತ್ತಾರೆಯೇ ವಿನಹ ನನ್ನ ಸ್ವತ್ತನ್ನು ಅತಿಕ್ರಮ ಪ್ರವೇಶ ಮಾಡಿ ಒತ್ತುವರಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರು ಕಟ್ಟಿದ ಮನೆಯ ಪಶ್ಚಿಮ ದಿಕ್ಕಿನ ಕಡೆ 15 ಅಡಿ ರಸ್ತೆ ಬರುತ್ತದೆ ಎಂದರೆ ಸಾಕ್ಷಿಯು ರಸ್ತೆಯ ಅಗಲ ಗೊತ್ತಿಲ್ಲ ಒಟ್ಟು ರಸ್ತೆ ಇರುತ್ತದೆ ಎಂದು ನುಡಿಯುತ್ತಾರೆ. ಪ್ರತಿವಾದಿಯರು ಸ್ವತ್ತಿನ ಪೂರ್ವದ ದಿಕ್ಕಿನ ಕಡೆ ನನಗೆ ಸೇರಿದ 25 ಗುಂಟೆ ಜಮೀನು ಇರುತ್ತದೆ ಎಂದರೆ ಸರಿ ಸಾಕ್ಷಿ ಮುಂದುವೆರದು ಪ್ರತಿವಾದಿಯರು ನನ್ನ 25 ಗುಂಟೆ ಜಾಗದಲ್ಲಿಯೇ ಒತ್ತುವರಿ ಮಾಡಿ ಮನೆಯುನ್ನು ಕಟ್ಟಿರುತ್ತಾರೆ.

ಪ್ರತಿವಾದಿಯರ ಮನೆಯ ಉತ್ತರ ದಿಕ್ಕಿಗೆ ಅವರು ಕೊಂಡುಕೊಂಡ ಜಾಗದ ಉಳಿಕೆ ಜಾಗ ಇರುತ್ತದೆ ಎಂದರೆ ಸರಿಯಲ್ಲ. ಸದರಿ ಪ್ರತಿವಾದಿಯರ ಸ್ವತ್ತಿನ ನಂತರ ಕಾರೆಹಳ್ಳಿಗೆ ಸೇರಿದ ರಾಜಕಾಲುವೆ ಬರುತ್ತದೆ ಎಂದರೆ ಸಾಕ್ಷಿಯು ಬರಿ ಕಾಲುವೆ ಬರುತ್ತದೆ ಯಾವುದೇ ರಾಜಕಾಲುವೆ ಇರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಮೇಲೆ ಹೇಳಿದ ಚೆಕ್ಕುಬಂದಿಯಲ್ಲಿರುವ ಸ್ವತ್ತಿಗೂ ನನಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರು ಸಾಲ ಮಾಡಿ ಕಟ್ಟಿದ ಮನೆಯನ್ನು ಕಬಳಿಸಬೇಕೆಂಬ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ.)**

**ಓ ಹೇ ಕೇ ಸರಿ ಇದೆ.**

**(ಎ.ಸಿ.ದಯಾನಂದ ಮೂರ್ತಿ)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಬಂಗಾರಪೇಟೆ.**